# ನಾದಾಮೃತ ನೀಡುವ ಶಿವ ವೀಣೆ

ರಷ್ಯಾದ ಎಂಜಿನಿಯರ್ ಡೆನಿಸ್ ಪೆಟ್ರೊವ್ 'ಶಿವ ವೀಣೆ' ಎಂಬ ಹೊಸ ಬಗೆಯ ವೀಣೆಯ ಆವಿಷ್ಕಾರ ಮಾಡಿದ್ದು, ಇದರಲ್ಲಿ ಕರ್ನಾಟಕ ಸಂಗೀತದ ಎಲ್ಲ ರಾಗಗಳನ್ನೂ ಸುಲಲಿತವಾಗಿ ನುಡಿಸಬಹುದು. ಸರಸ್ವತಿ ವೀಣೆ, ರುದ್ರವೀಣೆ, ಮೋಹನ ವೀಣೆ, ತರಂಗಿಣಿ ವೀಣೆ.. ಮುಂತಾದ ವೀಣೆಗಳ ಸಾಲಿಗೆ ಇದೀಗ ಹೊಸ ಸೇರ್ಪಡೆ ಈ 'ಶಿವ ವೀಣೆ'.

■ **ಉಮಾ ಅನಂತ್**



'ಶಿವ ವೀಣೆ ಆವಿಷ್ಕಾರ ಮಾಡಿದ ರಷ್ಯಾದ ಕಲಾವಿದ ಡೆನಿಸ್

ಸಂಗೀತ ವಾದ್ಯಗಳಲ್ಲಿ ಅದೆಷ್ಟು ಬಗೆ! ಸಂಗೀತದಲ್ಲಿ ವಾದನ ಕ್ರಮ ಹಿಂದೂಸ್ತಾನಿ ಶೈಲಿಯಲ್ಲೇ ಇರಲಿ, ಕರ್ನಾಟಕ ಸಂಗೀತವೇ ಆಗಿರಲಿ. ಸಂಗೀತ ವಾದ್ಯಗಳಲ್ಲಿ ನುಡಿಸುವ ಸಪ್ತಸ್ವರ 'ಸರಿಗಮಪದನಿ' ಕೇಳುಗರಿಗೆ ಯಾವತ್ತೂ ಆಪ್ಯಾಯಮಾನವೇ. ಪಿಟೀಲು, ಸಾರಂಗಿ, ಸರೋದ್, ಸಂತೂರ್‌ಗಳಂಥ ತಂತಿ ವಾದ್ಯಗಳಿಗೆ ಮೇಲ್ಪಂಕ್ತಿ ಹಾಕಿ ಅತ್ಯಂತ ಪ್ರಾಚೀನ ಹಾಗೂ ಎಲ್ಲ ತಂತಿವಾದ್ಯಗಳ ತಾಯಿ ಎಂಬ ಹೆಗ್ಗಳಿಕೆಗೆ ಪಾತ್ರವಾದ ವೀಣೆಯ ನಾದ ಅತ್ಯಂತ ಸುಮಧುರ. ವೀಣೆಯಲ್ಲಿ ರಾಗಾಲಾಪ ಎಂದಿಗೂ ಶ್ರವಣಾನಂದಕರವೂ ಹೌದು.

ವಾದ್ಯಗಳಲ್ಲಿ ಹೊಸ ಹೊಸ ಆವಿಷ್ಕಾರ ಆಗುತ್ತಲೇ ಇರುತ್ತದೆ. ಹಳೆಯ ವಾದ್ಯಕ್ಕೆ ಹೊಸ ರೂಪ, ಪುರಾತನ ವಾದ್ಯದಲ್ಲೇ ವಿಭಿನ್ನ ನಾದ ಕೊಡುವಂತೆ ವಾದ್ಯದಲ್ಲಿ ಬದಲಾವಣೆ.. ಹೀಗೆ. ವೀಣೆಯಲ್ಲೂ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಹಲವು ಪ್ರಕಾರದ ವೀಣೆಗಳು ಬಂದಿವೆ. ಎಲೆಕ್ಟ್ರಾನಿಕ್ ವೀಣೆ, ತರಂಗಿಣಿ ವೀಣೆ.. ಇತ್ಯಾದಿ. ಈ ಸಾಲಿಗೆ ಇದೀಗ ಹೊಸ ಸೇರ್ಪಡೆ ಎಂದರೆ ರಷ್ಯಾದ ಸಂಗೀತಗಾರ ಆವಿಷ್ಕಾರ ಮಾಡಿದ 'ಶಿವ ವೀಣೆ'. ಶಿವವೀಣೆಯ ನಾದ ಕೇಳುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ, ಮೋಡಿ ಮಾಡುತ್ತದೆ.

ವೀಣೆ ಅತ್ಯಂತ ವಿಶಿಷ್ಟ ನಾದ ಕೊಡುವ ಸಾಂಪ್ರದಾಯಿಕ ವಾದ್ಯ. ಪೌರಾಣಿಕ ಹಿನ್ನೆಲೆಯನ್ನೂ ಒಳಗೊಂಡ ಈ ವಾದ್ಯವನ್ನು ದೇವಾನುದೇವತೆಗಳು, ಶಿವ, ರಾವಣ, ಭೀಮ ಮುಂತಾದ ದೇವಮಾನವರೂ ನುಡಿಸುತ್ತಿದ್ದರಂತೆ. ಈ ವಾದ್ಯದ ಸುಧಾರಿತ ವಾದ್ಯವಾಗಿ ಹಾಗೂ ಇದರ ಮೇಲೆ ಹಲವು ಪ್ರಯೋಗಗಳು, ಅನ್ವೇಷಣೆಗಳು ನಡೆದಿವೆ. ವೀಣೆ ವಿದುಷಿ ಸುಮಾ ಸುಧೀಂದ್ರ ವೀಣೆಯ ಮತ್ತೊಂದು ಸುಧಾರಿತ ರೂಪವಾಗಿ 'ತರಂಗಿಣಿ ವೀಣೆ'ಯನ್ನು ಕಂಡುಹಿಡಿದರು. ಸಾಂಪ್ರದಾಯಿಕ ವಾದ್ಯಕ್ಕೆ ಆಧುನಿಕ ರೂಪ. ಹಗುರವಾದ ಮತ್ತು ಎಲಿ ಬೇಕಾದಲ್ಲಿ ಸುಲಭವಾಗಿ ಕೊಂಡೊಯ್ಯಬಲ್ಲ ಈ ವೀಣೆ ಸುಮಾ ಅವರ ಸಾಧನೆ, ಸಂಶೋಧನೆಗಳ ಫಲದಿಂದ ರೂಪುಗೊಂಡದ್ದು.

ಶಿವ ವೀಣೆ ಅತ್ಯಂತ ಸುಧಾರಿತ ವಾದ್ಯ. ಶಿವ ವೀಣೆ ಎಲೆಕ್ಟ್ರಾನಿಕ್ ವೀಣೆಯಾಗಿದ್ದು, ವಾದ್ಯದ ಸಾಗಾಣಿಕೆಗೆ, ಬಾಳಿಕೆಗೆ ಮತ್ತು ವಾದಕನ ಅನುಕೂಲತೆಗೆ ತಕ್ಕಂತೆ ರೂಪುಗೊಂಡಿದೆ. ಇದನ್ನು ಅತ್ಯಾಧುನಿಕ ಗಿಟಾರ್ ತಯಾರಿಕ ಉಪಕರಣ, ತಂತ್ರಜ್ಞಾನ ಮತ್ತು ವಸ್ತುಗಳನ್ನು ಬಳಸಿ ತಯಾರಿಸಲಾಗಿದೆ. ಕಲಾವಿದನ ಸೃಜನಶೀಲತೆಯ ಅನಾವರಣಕ್ಕೆ ಇಲ್ಲಿ ವಿಪುಲ ಅವಕಾಶಗಳಿವೆ. ನೋಡಲೂ ಬಹಳ ಸುಂದರವಾಗಿದೆ. ಹಗುರವಾಗಿದ್ದು ಒಂದು ಸ್ಥಳದಿಂದ ಇನ್ನೊಂದೆಡೆಗೆ ಕೊಂಡೊಯ್ಯಲು ಬಹಳ ಸುಲಭ.

### ಎಂಜಿನಿಯರ್‌ನ ಸಂಗೀತ ಪ್ರೀತಿ

ರಷ್ಯಾದ ಡೆನಿಸ್ ಪೆಟ್ರೊವ್ ಅವರು ಈ ವೀಣೆಯನ್ನು ತಯಾರಿಸಿದವರು. ವಿಜಯಕೃಷ್ ಅವರ ಸಹವರ್ತಿಯಾಗಿರುವ ಡೆನಿಸ್ ಈ ವೀಣೆಯನ್ನು ರಷ್ಯಾದಲ್ಲಿ ಆವಿಷ್ಕಾರ ಮಾಡಿದರು. ಹಲವು ವರ್ಷಗಳ ಸತತ ಸಂಶೋಧನೆ, ವಾದ್ಯದ ಮಾರ್ಪಾಡಿನ ಬಗ್ಗೆ ಚಿಂತನೆಯ ಫಲವಾಗಿ 2016ರಲ್ಲಿ ಮೊದಲ ಬಾರಿಗೆ ಈ ವೀಣೆಗೆ ಸುಧಾರಿತ ರೂಪ ನೀಡಿದರು.